ಓದಿದ್ದು ಜೋಸೆಫ್ ಹೆನ್ರಿಯೇ. ಅದೂ ಹಿಂದಿನ ಪ್ರಬಂಧದಂತೆ ಸಂಸ್ಥೆಯ ವಾರ್ಷಿಕ ವರದಿಯಲ್ಲಿ ಪ್ರಕಟಗೊಳ್ಳಲಿಲ್ಲ.

ವಿಜ್ಞಾನ ಲೋಕದ ಅನುಮೋದನೆ–ಶ್ಲಾಘನೆ ದೊರೆಯದಿದ್ದರೂ ಯೂನಿಸ್ ಒಂದಾದ ಮೇಲೆ ಒಂದರಂತೆ ಅನ್ವೇಷಣೆ ನಡೆಸುತ್ತ ತಮ್ಮ ಸಾಧನೆಗೆ ಪೇಟೆಂಟ್ ಪಡೆಯುತ್ತ ಖುಷಿಪಡುತ್ತಿದ್ದರು.

1888ರಲ್ಲಿ ಯೂನಿಸ್ ಫೂಟ್ ತೀರಿಕೊಂಡರು. ನೂರು ವರ್ಷಗಳ ನಂತರವಷ್ಟೇ ಜಗತ್ತಿಗೆ ಅವರ ಸಂಶೋಧನೆಗಳ ಮಹತ್ವ ಅರಿವಾಗಿದ್ದು. ಇತಿಹಾಸ ಸಂಶೋಧಕಿ ಸ್ಯಾಲಿ ಗ್ರೆಗರಿ ಕೋಲ್ಸ್ಟೆಡ್ ಎಂಬುವರು ಅಧ್ಯಯನಕ್ಕೆಂದು ಹಳೆಯ ಸೈಂಟಿಫಿಕ್ ಅಮೆರಿಕನ್ ಸಂಚಿಕೆಗಳನ್ನು ಓದುತ್ತಿರುವಾಗ ಯೂನಿಸ್ ಫೂಟ್ ಬರೆದ ಪ್ರಬಂಧ ಕಣ್ಣಿಗೆ ಬಿತ್ತು. ಯಾಕೆ ಯೂನಿಸ್‌ಗೆ ವಿಜ್ಞಾನಿಯ ಪಟ್ಟ ಕೊಟ್ಟಿಲ್ಲ ಎಂದು ಅವರು ತಕರಾರು ಎತ್ತಿದರು. ಯಾಕೆ ಅವರ ಕಾರ್ಯವನ್ನು ಇತರ ವಿಜ್ಞಾನಿಗಳು ಗುರುತಿಸಲಿಲ್ಲ? ಯೂನಿಸ್ ಮಹಿಳೆ, ಯೂನಿಸ್‌ಗೆ ಅಕಾಡೆಮಿ ಡಿಗ್ರಿ ಇಲ್ಲದೆ ಇದ್ದುದಕ್ಕಿರಬಹುದು ಅಥವಾ ಏಕಕಾಲದಲ್ಲಿ ಇಬ್ಬರು ಮಾಡಿದ ಅನ್ವೇಷಣೆಯಾಗಿರಬಹುದು ಇತ್ಯಾದಿ ಕಾರಣಗಳು ಮುಂದೆ ಬಂದವು.

ಜಾನ್ ಟಿಂಡಾಲ್‌ಗೆ ತಂತಾನೇ ಕಾರ್ಬನ್ ಡೈ ಆಕ್ಸೈಡ್ ಪ್ರಯೋಗ ಮಾಡಬೇಕೆಂಬ ವಿಚಾರ ಹೊಳೆಯಿತೆ? ಅಥವಾ ಅವರಿಗೆ ಯೂನಿಸ್ ಫೂಟ್ ಮಾಡಿದ ಸಂಶೋಧನೆಯ ಸುಳಿವು ಗೊತ್ತಾಗಿ, ಅದನ್ನು ಬಳಸಿಕೊಂಡರೆ? ಇಲ್ಲವಾದರೆ ವಾತಾವರಣದಲ್ಲಿ ಬರೀ ಶೇಕಡ 0.03ರಷ್ಟು ಅಲ್ಪ ಪ್ರಮಾಣದಲ್ಲಿರುವ ಇಂಗಾಲದ ಡೈ ಆಕ್ಸೈಡ್ ವಾಯುಮಂಡಲದ ತಾಪವನ್ನೇ ಏರಿಸೀತು ಎಂಬ ಊಹೆ ಅವರಿಗೆ ಹೇಗೆ ಬರಲು ಸಾಧ್ಯ? (ಏಕಕಾಲದಲ್ಲಿ ಒಂದೇ ಹೊಳಹು ಹಲವರಲ್ಲಿ ಮೂಡಿದ ಉದಾಹರಣೆಗಳು ಸಾಕಷ್ಟಿವೆ. ಡಾರ್ವಿನ್ ವಿಕಾಸವಾದವನ್ನು ಮಂಡಿಸುವ ಹೊತ್ತಿನಲ್ಲೇ ಆಲ್ಫ್ರೆಡ್ ರಸೆಲ್ ವ್ಯಾಲೇಸ್ ಎಂಬುವರೂ ಆ ಬಗ್ಗೆ ಉಪನ್ಯಾಸ ಕೊಟ್ಟಿದ್ದರು. ಕಾರ್ಲ್ ಶೀಲೆ ಮತ್ತು ಜೋಸೆಫ್ ಪ್ರಿಸ್ಟ್ಲೆ



ಯೂನಿಸ್ ಫೂಟ್‌ಗೆ ಗೂಗಲ್ ಗೌರವ

ಇಬ್ಬರೂ ಏಕಕಾಲದಲ್ಲಿ ಆಮ್ಲಜನಕದ ಇರುವಿಕೆಯನ್ನು ಪತ್ತೆ ಹಚ್ಚಿದ್ದರು. ಬೆಳಕಿನ ಕಿರಣಗಳ ಚದುರುವಿಕೆ ಕುರಿತು ನಮ್ಮ ಸಿ.ವಿ. ರಾಮನ್ ತೋರಿಸುವ ಹೊತ್ತಿನಲ್ಲೇ ಆ ಕುರಿತು ರಷ್ಯನ್ ಭೌತವಿಜ್ಞಾನಿಗಳಿಬ್ಬರು ಪ್ರಬಂಧ ಬರೆದಿದ್ದರು).

ಯೂನಿಸ್‌ಳ ಸಂಶೋಧನೆಯನ್ನು ಟಿಂಡಾಲ್ ಕದ್ದಿದ್ದರು ಎಂಬುದಕ್ಕೆ ಖಚಿತ ಸಾಕ್ಷ್ಯ ಸಿಗಲಿಲ್ಲ. ಆದರೆ ಯೂನಿಸ್ ಫೂಟ್ ಬರೆದ ಪ್ರಬಂಧ ಪ್ರಕಟವಾದ 'ಅಮೆರಿಕನ್ ಜರ್ನಲ್ ಆಫ್ ಸೈನ್ಸ್'ನ 1856ರ ಸಂಚಿಕೆಯಲ್ಲೇ ಟಿಂಡಾಲ್‌ನ ಪ್ರಬಂಧವೊಂದು ಪ್ರಕಟಗೊಂಡಿತ್ತು. ಆತ ಯೂನಿಸ್ ಪ್ರಬಂಧವನ್ನು ಓದಿದ್ದಿರಬಹುದಲ್ಲ? ಏನೇ ಇರಲಿ, ಈಗಾದರೂ ಯೂನಿಸ್‌ಗೆ ಗೌರವ ಕೊಡಬೇಕು ಎಂದು ಹಲವರೆಂದರು.

ಅಮೆರಿಕದ ಜಿಯೊಫಿಸಿಕಲ್ ಯೂನಿಯನ್ ವಿಜ್ಞಾನದಲ್ಲಿ ಸಾಧನೆಗೈದವರಿಗೆ ಈಗ 'ಯೂನಿಸ್ ಫೂಟ್ ಮೆಡಲ್' ಕೊಡಲಾಗುತ್ತಿದೆ. ಯೂನಿಸ್ ಫೂಟ್ ಅಂದು ನುಡಿದ ಜಾಗತಿಕ ವಿದ್ಯಮಾನದ ಭವಿಷ್ಯ ಇಂದು ನಿಜವಾಗಿದೆ. ಆಗಸದಲ್ಲಿ ನಾವೇ ತುಂಬಿದ ಇಂಗಾಲದ ಡೈ ಆಕ್ಸೈಡ್ ಸಂಕಟ ದುಪ್ಪಟ್ಟಾಗಿ ಇಡೀ ಭೂಮಂಡಲವನ್ನೇ ಸುತ್ತಿಕೊಂಡಿದೆ.

ಪ್ರತಿಕ್ರಿಯಿಸಿ: feedback@sudha.co.in

# ಔಷಧೀಯ ಗುಣಗಳ ಪಾನಿ ಫಲ್



**ಫಲ ಸಂಧಾನ**

ಉತ್ತರ ಭಾರತ ಪ್ರವಾಸ ಸಮಯದಲ್ಲಿ ಕೋಲ್ಕತ್ತ ನಗರದ ಸಿಯಾಲ್ದಾ ರೈಲು ನಿಲ್ದಾಣದಲ್ಲಿದ್ದೆವು, ಮುಂದೆ ಪ್ರಯಾಣ ಬೆಳೆಸಬೇಕಾಗಿತ್ತು. ರೈಲು ಬರಲು ಸಮಯವಿದ್ದುದರಿಂದ ಹೊರಗೆ ತಿರುಗಾಡಲು ಹೊರಟೆವು. ರೈಲು ನಿಲ್ದಾಣದ ಸಮೀಪದ ಮಾರುಕಟ್ಟೆಯಿಂದ ಹಣ್ಣುಗಳನ್ನು ಖರೀದಿಸುತ್ತಿರುವಾಗ ಸುಮಾರು ಒಂದು ಅಂಗುಲ ವ್ಯಾಸವುಳ್ಳ ವಿಚಿತ್ರ ಆಕಾರದ, ಆಲಿವ್ ಹಸಿರು ಮತ್ತು ಕೆನ್ನೇರಳೆ ಬಣ್ಣದ ಹಣ್ಣುಗಳು ಗಮನಸೆಳೆದವು. ವಿಚಾರಿಸಲು, 'ಪಾನಿ ಫಲ್' ಹಣ್ಣುಗಳೆಂದು ಹಿಂದಿ ಭಾಷೆಯಲ್ಲಿ ಹೇಳಿದರು.

ವಾಟರ್ ಚೆಸ್‌ನಟ್ (Water Chestnut), ವಾಟರ್ ಕ್ಯಾಲ್ಟ್ರೋಪ್ (Water Caltrop), ಸಿಂಗಾರ, ಡೆವಿಲ್ ಪಾಡ್ ಮುಂತಾದ ಹೆಸರುಗಳಿಂದ ಚಿರಪರಿಚಿತವಾಗಿರುವ ಹಣ್ಣುಗಳು ತೇಲುವ ವಾರ್ಷಿಕ ಜಲಸಸ್ಯಗಳ ಜಾತಿಗೆ ಸೇರಿವೆ. ತೇವ ಮತ್ತು ಜವುಗು ಜಲಮೂಲಗಳ ಪ್ರದೇಶಗಳಲ್ಲಿ ಇದನ್ನು ಬೆಳೆಯಲಾಗುತ್ತದೆ. ಹಣ್ಣುಗಳ ಮೇಲಿನ ಸಿಪ್ಪೆಯನ್ನು ಸುಲಿದು ಬೆಳ್ಳಗಿನ ತಿರುಳನ್ನು ತಿನ್ನಬಹುದು ಅಥವಾ ತಿರುಳನ್ನು ಒಣಗಿಸಿ ಪುಡಿ ಮಾಡಿ ಉಪಯೋಗಿಸಬಹುದು. ಉತ್ತರ ಭಾರತದಲ್ಲಿ, ಅದರಲ್ಲೂ ಪಶ್ಚಿಮ ಬಂಗಾಳದ ಜನರು 'ಪಾನಿ ಫಲ್' ಅನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಒಂದು ಕಿಲೋಗೆ 60–70 ರೂಪಾಯಿಗಳಲ್ಲಿ ಮಾರಾಟವಾಗುವ 'ಪಾನಿ ಫಲ್' ಹಲವಾರು ಪೋಷಕಾಂಶಗಳಿಂದ ಕೂಡಿದ್ದು, ಔಷಧೀಯ ಗುಣಗಳನ್ನು ಹೊಂದಿದೆ. ಹಣ್ಣು ಮತ್ತು ಪುಡಿಯನ್ನು ಸಕ್ಕರೆ ಕಾಯಿಲೆ, ಹೃದಯದ ತೊಂದರೆಗಳು, ಸಂಧಿವಾತ, ಹುಣ್ಣುಗಳು, ಟಾನ್ಸಿಲ್ಸ್, ಬಿರುಕುಬಿಟ್ಟ ಹಿಮ್ಮಡಿ, ಒಡೆದ ತುಟಿಗಳು ಮೊದಲಾದ ಸಮಸ್ಯೆಗಳ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಈ ಹಣ್ಣುಗಳಲ್ಲಿ ನೀರಿನ ಅಂಶವು ಅಧಿಕವಾಗಿದ್ದು, ಇದನ್ನು ಸೇವಿಸುವುದರಿಂದ ದೇಹದಲ್ಲಾಗುವ ನಿರ್ಜಲೀಕರಣದಿಂದ ಮುಕ್ತಿ ಪಡೆಯಬಹುದಾಗಿದೆ.

■ ಜಿ.ಪದ್ಮಾ